# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್.ಸಿ. 245/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ | ಶ್ರೀ ಶಿವರಾಜು.ಆರ್ | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ | ಶ್ರೀ ರಾಚಶೆಟ್ಟಿ | **23.01.2025** |
| **ವಯಸ್ಸು** | ಃ | **34** ವರ್ಷ | |
| **ವೃತ್ತಿ** | ಃ | ಪಿ.ಸಿ, ವಿದ್ಯಾರಣ್ಯಪುರಂ ಪೋಲೀಸ್ ಠಾಣೆ | **ಪ್ರಾ.ಸಾ. ಃ 09** |
| **ವಾಸಸ್ಥಳ** | ಃ | ಮೈಸೂರು | **ಚಾ.ಸಾ. ಃ 16** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *2019* ರಿಂದ *2024* ರವರೆಗೆ ಮೇಟಗಳ್ಳಿ ಪೋಲೀಸ್ ಠಾಣೆಯಲ್ಲಿ ಪಿ.ಸಿ ಆಗಿ ಕೆಲಸ ಮಾಡಿದ್ದೇನೆ. ದಿಃ*16.03.2023* ರಂದು ನನ್ನನ್ನು ಹಗಲು ಕರ್ತವ್ಯಕ್ಕೆ ನೇಮಿಸಿದ್ದರು. ಆ ಕಾಲಕ್ಕೆ ಎಸ್.ಹೆಚ್.ಒ ಇವರ ಆದೇಶದ ಮೇರೆಗೆ ಮೊ.ಸಂಖ್ಯೆ *33/2023* ಪ್ರಕರಣದಲ್ಲಿನ ಆರೋಪಿಯಾದ ಆದಿತ್ಯಗೌಡ ಇವರನ್ನು ನಾನು ಮತ್ತು ಪಿ.ಸಿ-*559* ಪ್ರಕಾಶ ಮಹಜರ್ ಗೆ ಕರೆದುಕೊಂಡು ಕುಂಬಾರಕೊಪ್ಪಲು *60* ಅಡಿ ರಸ್ತೆಗೆ ಹೋಗಿದ್ದೇವು. ಆ ಕಾಲಕ್ಕೆ ಸ್ವಇಚ್ಛೆಯಿಂದ ಡ್ರ್ಯಾಗರ್ ಅನ್ನು ಅಲ್ಲಿ ಇಟ್ಟಿರುವುದಾಗಿ ಆ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದ. ಆ ಕಾಲಕ್ಕೆ ಆರೋಪಿತ ನಿರ್ಮಾಣ ಹಂತದ ಕಟ್ಟಡದ ಮುಂದಗಡೆ ಇಟ್ಟಿದ್ದ ಒಂದು ಡ್ರ್ಯಾಗರ್ ಅನ್ನು ಹಾಜರುಪಡಿಸಿ ಅದನ್ನು ದಿಃ*14.03.2023* ರಂದು ಹಲ್ಲೆ ಕೃತ್ಯಕ್ಕೆ ಬಳಸಿ ವಾಪಸ್ಸು ಬರುವಾಗ ಆ ಸ್ಥಳದಲ್ಲಿ ಇಟ್ಟಿರುವುದಾಗಿ ಹೇಳಿದ್ದ. ಆ ಡ್ರ್ಯಾಗರ್ ಅನ್ನು ತನಿಖಾಧಿಕಾರಿ ಪರಿಶೀಲಿಸಿ ಮಹಜರ್ ಮಾಡಿ ವಶಕ್ಕೆ ಪಡೆದಿದ್ದರು. ಆ ಕಾಲಕ್ಕೆ ಪಂಚರಾದ ಅಮೃತ್ ಮತ್ತು ನಂಜುಂಡಸ್ವಾಮಿ ಹಾಜರಿದ್ದರು. ಆ ಡ್ರ್ಯಾಗರ್ *8.5* ಇಂಚು ಉದ್ದ ಮತ್ತು ಅಂದಾಜು ***4 ¼*** ಅಲುಗು

ಮತ್ತು *4* ಇಂಚು ಹಿಡಿಕೆ ಇದುದ್ದು ಗೊತ್ತು. ಅದಕ್ಕೆ ರಕ್ತದ ಕಲೆಯಾಗಿತ್ತು. ಆ ಡ್ರ್ಯಾಗರ್ ಅನ್ನು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಸೀಲ್ ಮಾಡಿ ವಶಕ್ಕೆ ಪಡೆದಿದ್ದರು. ಆ ಪಂಚನಾಮೆಗೆ ನಾನು ಸಹಿ ಹಾಕಿದ್ದೆ. ಈಗ ನಾನು ನೋಡುತ್ತಿರುವ ನಿ.ಪಿ-*13* ಮಹಜರ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ-*13(ಸಿ)* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಎಂ.ಒ-*2* ಡ್ರ್ಯಾಗರ್ ಆ ದಿನ ಅಮಾನತ್ತು ಪಡಿಸಿಕೊಂಡ ಡ್ರ್ಯಾಗರ್ ಇದೆ. ಆ ಮಹಜರ್ ಅನ್ನು ಮದ್ಯಾಹ್ನ *12.30* ರಿಂದ *1.15* ರವರೆಗೆ ಮಾಡಿದ್ದರು. ನಿ.ಪಿ-*14* ರಿಂದ *16* ಮಹಜರ್ ಕಾಲಕ್ಕೆ ತೆಗೆದ ಪೊಟೋಗಳು ಇವೆ. ಕೋರ್ಟ್ ಮುಂದೆ ಇರುವ ಆರೋಪಿತನೇ ಆ ದಿನ ಡ್ರ್ಯಾಗರ್ ಹಾಜರುಪಡಿಸಿದ್ದ ವ್ಯಕ್ತಿ ಇರುತ್ತಾನೆ. ಈ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೇನೆ.

<u>ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಟಿ.ಹೆಚ್.ಕೆ ರವರಿಂದಃ-</u>

*2.* ನನಗೆ ಆ ದಿನ ಆ ಕರ್ತವ್ಯಕ್ಕೆ ನೇಮಕ ಮಾಡಿದ ಬಗ್ಗೆ ನೋಟಿಸ್ ಕೊಟ್ಟಿರಲಿಲ್ಲ. ಆ ದಿನ ಎಸ್.ಹೆಚ್.ಒ, ನಾನು, ಪ್ರಕಾಶ, ಕೋರ್ಟ್ ಮುಂದೆ ಇರುವ ಆರೋಪಿ ಠಾಣೆಯಲ್ಲಿ ಹಾಜರಿದ್ದೆವು ಬೇರೆ ಯಾರು ಹಾಜರಿದ್ದೆವು ಎಂದು ಗೊತ್ತಿಲ್ಲ. ಮದ್ಯಾಹ್ನ *12.05* ಕ್ಕೆ ಠಾಣೆಯಿಂದ ಹೊರಟಿದ್ದೆವು. ಇಲಾಖೆಯ ಕೆಎ-*55*-ಜಿ-*233* ಜೀಪ್ ನಲ್ಲಿ ಆ ಸ್ಥಳಕ್ಕೆ ಹೊಗಿದ್ದೆವು. ಆ ಕಾಲಕ್ಕೆ ನಾನು, ಚಾ.ಸಾ-*15*, ಆರೋಪಿ, ತನಿಖಾಧಿಕಾರಿ ಆ ಸ್ಥಳಕ್ಕೆ ಹೊಗಿದ್ದವು. ಆ ಕಾಲಕ್ಕೆ ನಮ್ಮೊಂದಿಗೆ ಬೇರೆ ಯಾರು ಬಂದಿರಲಿಲ್ಲ. ಆ ದಿನ ಪಂಚರು ಠಾಣೆಯಿಂದಲೇ ಆ ಸ್ಥಳಕ್ಕೆ ಬಂದಿದ್ದರು ಆದರೆ ಅವರು ಜೀಪ್ ನಲ್ಲಿ ಬಂದಿರಲಿಲ್ಲ. ತನಿಖಾಧಿಕಾರಿಗೆ ನೋಟಿಸ್ ಕೊಟ್ಟಿದ್ದರೋ ಇಲ್ಲವೊ ನಾನು ತಿಳಿದುಕೊಂಡಿಲ್ಲ. ಆ ದಿನ ನಾವು ಆ ಸ್ಥಳಕ್ಕೆ ಹೋದ ಬಗ್ಗೆ ಠಾಣಾ ಡೈರಿಯಲ್ಲಿ ನಮೂದು ಮಾಡಿದ್ದಾರೆ. ಆದರೆ ಆ ಬಗ್ಗೆ ಹೇಳಿಕೆಯಲ್ಲಿ ನಮೂದು ಇಲ್ಲ ಎಂದರೆ ನಿಜ. ಮಹಜರ್ ನಲ್ಲಿ ಕಬ್ಬಿಣದ ಹಿಡಿ ಮೇಲ್ಭಾಗದಲ್ಲಿ ಏನಿತ್ತು ಎಂದು ನಮೂದು ಇಲ್ಲ ಎಂದರೆ ನಿಜ. ಡ್ರ್ಯಾಗರ್ ಮೇಲೆ ಇದ್ದ ರಕ್ತದ ಕಲೆ ಮನುಷ್ಯರದ್ದೋ ಅಥವಾ ಬೇರೆ ಪ್ರಾಣಿಯದ್ದೋ ಎಂದು

ಮಹಜರ್ ನಲ್ಲಿ ನಮೂದು ಇಲ್ಲ ಎಂದರೆ ನಿಜ. ಮಹಜರ್ ಅನ್ನು ತನಿಖಾಧಿಕಾರಿ ಕಿರಣ್ ಎನ್ನುವವರು ಬರೆದಿದ್ದಾರೆ. ಅದನ್ನು ಠಾಣೆಯಲ್ಲೇ ಬರೆದಿದ್ದಾರೆ ಎಂದರೆ ಸರಿಯಲ್ಲ. ಆ ಸ್ಥಳದಲ್ಲಿ ಮಹಜರ್ ಬರೆದೇ ಇಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲೆ ಮಹಜರ್ ಬರೆದಿದ್ದಾರೆ ಎಂದರೆ ಸರಿಯಲ್ಲ. ಮೇಲಾದಿಕಾರಿಗಳ ಒತ್ತಡದ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಡ್ರ್ಯಾಗರ್ ಅನ್ನು ಸೀಲ್ ಮಾಡಿದ ಚೀಲದ ಮೇಲೆ ನನ್ನ ಸಹಿ ಪಡೆದಿಲ್ಲ. ಎಂ.ಒ-*2* ರಂತ ಡ್ರ್ಯಾಗರ್ ಗುಜರಿಗಳಲ್ಲಿ ಮತ್ತು ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ನಿಜ. ಮಹಜರ್ ಮಾಡಿದ ಸ್ಥಳದ ದಾಖಲೆಗಳನ್ನು ಪಡೆದಿಲ್ಲ ಎಂದರೆ ಇರಬಹುದು. ಆ ದಿನ ಆ ಜಾಗದ ಮಾಲೀಕರನ್ನು ಕರೆಸಿಲ್ಲ. ನಾನು ಮಹಜರ್ ಕಾಲಕ್ಕೆ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ನಲ್ಲಿ ಹಾಜರಿದ್ದ ಎಲ್ಲರ ಹೆಸರಗಳನ್ನು ಬರೆದಿಲ್ಲ ಎಂದರೆ ಸಹಿಯನ್ನು ಪಡೆದಿದ್ದಾರೆ. ಆದರೆ ಪೂರ್ತಿ ಹೆಸರು ವಿಳಾಸ ಬರೆದಿಲ್ಲ. ಆ ಸ್ಥಳದಲ್ಲಿದ್ದ ಯಾವ ಹಂತದಲ್ಲಿತ್ತು ಎಂದು ನಮೂದಿಲ್ಲ ಎಂದರೆ ನಿಜ. ಆ ಮನೆಯ ಅಳತೆ ನಮೂದಿಸಿಲ್ಲ ಎಂದರೆ ನಿಜ. ಮಹಜರ್ ನಲ್ಲಿ ಆ ಸ್ಥಳದಲ್ಲಿ ಮರಗಳಿದ್ದ ಬಗ್ಗೆ ನಮೂದು ಇಲ್ಲ ಎಂದರೆ ನಿಜ. ಆ ಸ್ಥಳದಲ್ಲಿ ಮಹಜರ್ ಮಾಡೇ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*